ಕರ್ನಾಟಕ ಸರ್ಕಾರ

ಮಾರ್ಚ್ 14, 2017

# ರಾಷ್ಟ್ರದಲ್ಲೇ ವಿನೂತನ ಪ್ರಯೋಗ : ಮುಂಗಾರು ಹಂಗಾಮಿನ ವೈಫಲ್ಯದಿಂದ ಉಂಟಾದ ಬೆಳೆ ಹಾನಿಗೆ ಪರಿಹಾರ ತಂತ್ರಾಂಶದ ಮೂಲಕ 671 ಕೋಟಿ ರೂ. ಇನ್‌ಪುಟ್ ಸಬ್ಸಿಡಿ ವಿತರಣೆ, ರೈತರ ಬ್ಯಾಂಕ್ ಖಾತೆಗಳಿಗೆ ನೇರ ವರ್ಗಾವಣೆ



**ಬೆಂಗಳೂರು, ಮಾರ್ಚ್ 14:**

ಕಳೆದ ಮುಂಗಾರು ಹಂಗಾಮಿನ ವೈಫಲ್ಯದಿಂದ ಉಂಟಾದ 26.16 ಲಕ್ಷ ಹೆಕ್ಟೇರ್ ಬೆಳೆಹಾನಿಗೆ ಪರಿಹಾರ ತಂತ್ರಾಂಶದ ಮೂಲಕ 671 ಕೋಟಿ ರೂ ಇನ್‌ಪುಟ್ ಸಬ್ಸಿಡಿಯನ್ನು 9.68 ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ ನೇರ ವರ್ಗಾವಣೆ ಮಾಡಿ ರಾಷ್ಟ್ರದಲ್ಲೇ ವಿನೂತನ ಪ್ರಯೋಗಕ್ಕೆ ಕರ್ನಾಟಕ ಸರ್ಕಾರ ವೇದಿಕೆಯಾಗಿದೆ.

ಮಂಗಳವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ***ಭೂಮಿ*** ಹಾಗೂ *ನಗರ ಆಸ್ತಿ ಮಾಲೀಕತ್ವ ದಾಖಲೆ* ( ಅರ್ಬನ್ ಪ್ರಾಪರ್ಟಿ ಓನರ್‌ಶಿಪ್ ರೆಕಾರ್ಡ್ಸ್ ) ಸಹಯೋಗದೊಂದಿಗೆ ರಾಜ್ಯ ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ವಿಭಾಗವು ರೈತರ ಆಧಾರ್ ಸಂಖ್ಯೆ ಆಧರಿಸಿ ಅಂತರ್ಜಾಲ ಆಧಾರಿತ 'ಪರಿಹಾರ' ತಂತ್ರಾಂಶದ ಮೂಲಕ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಇನ್‌ಪುಟ್ ಸಬ್ಸಿಡಿ ವರ್ಗಾವಣೆ ಮಾಡುವ ರಾಜ್ಯ ಸರ್ಕಾರದ ಈ ಕ್ರಮ ಇಡೀ ಭಾರತದಲ್ಲೇ ವಿಭಿನ್ನ ಮತ್ತು ವಿಶಿಷ್ಠ ಪ್ರಯೋಗವಾಗಿದೆ ಎಂದು ಬಣ್ಣಿಸಿದರು.

ರಾಷ್ಟ್ರೀಯ ವಿಪತ್ತು ಸ್ಪಂದನಾ ನಿಧಿ ( ನ್ಯಾಷನಲ್ ಡಿಸಾಸ್ಟರ್ ರೆಸ್ಪಾನ್ಸ್ ಫಂಡ್ ) ಅಡಿಯಲ್ಲಿ ಕೇಂದ್ರ ಸರ್ಕಾರವು 2016 ರ ಮುಂಗಾರು ಹಂಗಾಮಿನಲ್ಲಿ ಬರ ಪರಿಸ್ಥಿತಿಯಿಂದ ರಾಜ್ಯದಲ್ಲಿ ಉಂಟಾದ ಬೆಳೆ ಹಾನಿಗೆ ಇನ್‌ಪುಟ್ ಸಬ್ಸಿಡಿ ಪಾವತಿಸಲು 450 ಕೋಟಿ ರೂ.

ಅನುದಾನ ಬಿಡುಗಡೆ ಮಾಡಿದೆ. ಇದರೊಂದಿಗೆ ರಾಜ್ಯ ಸರ್ಕಾರವೂ ಕೂಡ 221 ಕೋಟಿ ರೂ. ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಿದೆ.

**ಇನ್‌ಪುಟ್ ಸಬ್ಸಿಡಿ**

ಎಲ್ಲಾ ಅರ್ಹ ಫಲಾನುಭವಿಗಳಿಗೆ ಇನ್‌ಪುಟ್ ಸಬ್ಸಿಡಿ ವಿತರಿಸಲಾಗುವುದು. ಬರದ ಪರಿಣಾಮದಿಂದ ರೈತರ ಜಮೀನಿನಲ್ಲಿ ಬಿತ್ತನೆಯಾದ ಬೆಳೆಯು ಶೇಕಡಾ 33 ಕ್ಕಿಂತಲೂ ಹೆಚ್ಚು ಹಾನಿಯಾಗಿದ್ದಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಮಳೆಯಾಶ್ರಿತ ಬೆಳೆಗೆ

ಪ್ರತಿ ಹೆಕ್ಟೇರ್‌ಗೆ 6,800 ರೂ., ನೀರಾವರಿ ಬೆಳೆಗೆ ಪ್ರತಿ ಹೆಕ್ಟೇರ್‌ಗೆ 13,500 ರೂ., ಬಹುವಾರ್ಷಿಕ ಬೆಳೆಗೆ ಪ್ರತಿ ಹೆಕ್ಟೇರ್‌ಗೆ 18,000 ರೂ. ಇನ್‌ಪುಟ್ ಸಬ್ಸಿಡಿಯನ್ನು ಗರಿಷ್ಠ ಎರಡು ಹೆಕ್ಟೇರ್ ಭೂಮಿಗೆ ಸೀಮಿತಗೊಳಿಸಿ ವಿತರಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.

ಪರಿಹಾರ ತಂತ್ರಂಶವು ಭೂಮಿ ತಂತ್ರಾಶದಿಂದ ರೈತರ ಜಮೀನಿನ ವಿಸ್ತೀರ್ಣ, ಬೆಳೆ ಹಾನಿ ಪ್ರದೇಶದ ವಿಸ್ತೀರ್ಣ, ರೈತರ ಬ್ಯಾಂಕ್ ಸಂಖ್ಯೆಯು ಆಧಾರ್ ಸಂಖ್ಯೆ ಜೋಡಣೆಯಾದ ವಿವರ ಲಭ್ಯವಾಗಲಿದೆ. ಇದರಿಂದ, ನೈಜ ಫಲಾನುಭವಿಗಳಿಗೆ ಪರಿಹಾರ ದೊರೆಯಲಿದೆ. ಕೇಂದ್ರ ಸರ್ಕಾರದ 2016 ರ ಪರಿಷ್ಕೃತ ಬರ ಕೈಪಿಡಿಯ ಅನುಸಾರ ಇನ್‌ಪುಟ್ ಸಬ್ಸಿಡಿಯನ್ನು ನೇರವಾಗಿ ಫಲಾನುಭವಿಗಳಿಗೆ ಸಂದಾಯವಾಗಲಿದೆ ಎಂದು ಅವರು ಹೇಳಿದರು.

ಅಂತೆಯೇ, 2016 ರ ಮುಂಗಾರು ವೈಫಲ್ಯದ ಹಿನ್ನೆಲೆಯಲ್ಲಿ ರಾಜ್ಯದ 176 ತಾಲ್ಲೂಕುಗಳ ಪೈಕಿ 139 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳು ಎಂದು ಘೋಷಿಸಲಾಗಿತ್ತು. ಕೇಂದ್ರ ಸರ್ಕಾರದ ರಾಷ್ಟ್ರೀಯ ವಿಪತ್ತು ಸ್ಪಂದನಾ ನಿಧಿಯ ಮಾರ್ಗಸೂಚಿಗಳಂತೆ ರಾಜ್ಯ ಸರ್ಕಾರವು 4702 ಕೋಟಿ ರೂ. ಅನುದಾನ ಕೋರಿ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು.

**ಕನಿಷ್ಠ ಅವಧಿಯಲ್ಲಿ ಗರಿಷ್ಠ ದಾಖಲಾತಿ**

ಕೇಂದ್ರ ಸರ್ಕಾರದ ಉನ್ನತ ಮಟ್ಟದ ಸಮಿತಿಯು ಪ್ರಸಕ್ತ ಸಾಲಿನ ಜನವರಿ 5 ರಂದು ರಾಜ್ಯಕ್ಕೆ 1682 ಕೋಟಿ ರೂ. ಅನುದಾನವನ್ನು ಮಂಜೂರು ಮಾಡಿ, ಮೊದಲ ಹಂತದಲ್ಲಿ 450 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. ಇನ್‌ಪುಟ್ ಸಬ್ಸಿಡಿ ಅನುದಾನವನ್ನು ತ್ವರಿತವಾಗಿ ಅರ್ಹ ಫಲಾನುಭವಿಗಳಿಗೆ ವಿತರಿಸಲು ಅನುವಾಗುವಂತೆ ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ವಿಭಾಗವು ಭೂಮಿ ಉಸ್ತುವಾರಿ ಕೋಶದ ಸಹಯೋಗದೊಂದಿಗೆ ಪರಿಹಾರ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದೆ. ಕಳೆದ ಎರಡು ತಿಂಗಳ ಕನಿಷ್ಠ ಅವಧಿಯಲ್ಲಿ 40 ಲಕ್ಷ ಫಲಾನುಭವಿಗಳ ಗರಿಷ್ಠ ದಾಖಲಾತಿಗಳನ್ನು ಸಿದ್ಧಪಡಿಸಿದೆ ಎಂದು ಸಿದ್ದರಾಮಯ್ಯ ಅವರು ವಿವರಿಸಿದರು.

## ಮೆಚ್ಚುಗೆ-ಸಂತಸ- ಪ್ರಶಂಸೆ

ಭತ್ತದ ಬೆಳೆ ಕಳೆದು ಕೊಂಡ ಕೊಡಗಿನ ರೈತ ದೇವಯ್ಯ ಅವರು ಮುಖ್ಯಮಂತ್ರಿ ಜೊತೆ ಮಾತನಾಡಿ ಸಕಾಲಕ್ಕೆ ಪರಿಹಾರ ಪಾವತಿಸಿರುವ ಬಗ್ಗೆ ಮೆಚ್ಚುಗೆ ಹಾಗೂ ಸಂತಸ ವ್ಯಕ್ತಪಡಿಸಿದರು. ಅಂತೆಯೇ, ಸೋಯಾ ಬೆಳೆ ವಿಮೆ ಮಾಡಿದ ಯಾದಗಿರಿಯ ರೈತ ಪ್ರತಿಕ್ರಿಯಿಸಿ ಸರ್ಕಾರದ ಕ್ರಮವನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು.

ರಾಜ್ಯ ಸರ್ಕಾರ ರೈತರ ಪರವಾಗಿದೆ. ಮುಂದಿನ ದಿನಗಳಲ್ಲಿ ರೈತರ ಬೆಳೆ ವಿಮೆ, ಬೆಳೆ ಪರಿಹಾರ ಸೇರಿದಂತೆ ಎಲ್ಲಾ ನೆರವನ್ನು ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪಾವತಿಸುವ ವಿನೂತನ ತಂತ್ರಾಂಶವನ್ನು ಸಿದ್ದಪಡಿಸಿ ಅನುಷ್ಠಾನಗೊಳಿಸಲಾಗುತ್ತದೆ.

## ಸಂರಕ್ಷಣಾ ತಂತ್ರಾಂಶ

ಕರ್ನಾಟಕ ರೈತರ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಶೇಕಡಾ 50 : 50 ರ ಅನುಪಾತದಡಿ ತಲಾ 850 ಕೋಟಿ ರೂ ವಿಮಾ ಕಂತನ್ನು ಪಾವತಿಸಲಾಗಿದೆ. ಮುಂದಿನ ದಿನ ದಿನಗಳಲ್ಲಿ ರೈತ ಸಮುದಾಯಕ್ಕೆ ಬೆಳೆ ನಷ್ಟಕ್ಕೆ ಪರಿಹಾರ ಒದಗಿಸುವ ಸಂರಕ್ಷಣಾ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ. ಚಿತ್ರದುರ್ಗ, ಚಾಮರಾಜನಗರ, ಕೋಲಾರ ಸೇರಿದಂತೆ ಆರು ಜಿಲ್ಲೆಗಳ 38,596 ರೈತರಿಗೆ 56.57 ಕೋಟಿ ರೂ ವಿಮಾ ಪರಿಹಾರವನ್ನು ರೈತರ ಖಾತೆಗಳಿಗೆ ಜಮೆ ಆಗಲಿದೆ.

## ಆಡಳಿತದಲ್ಲಿ ಕ್ರಾಂತಿ

ಕಂದಾಯ ಸಚಿವ ಕಾಗೋಡು ತಿಮ್ಮಪ್ಪ ಅವರು ಮಾತನಾಡಿ ರಾಜ್ಯದಲ್ಲಿ ಮೊಟ್ಟ ಮೊದಲಬಾರಿಗೆ ಏಕ ಕಾಲಕ್ಕೆ ಬೆಳೆ ನಷ್ಟದ ಪರಿಹಾರವನ್ನು ರೈತರ ಖಾತೆಗಳಿಗೆ ಪಾವತಿಸುವ ಮೂಲಕ ಆಡಳಿತದಲ್ಲಿ ಕ್ರಾಂತಿ ಸಾಧಿಸಿರುವ ಧ್ಯೋತಕ ಇದಾಗಿದೆ. ರೈತರು ಸರ್ಕಾರದ ಕ್ರಮವನ್ನು ಸ್ವಾಗತಿಸುತ್ತಾರೆ. ಉಳಿದ ಮೊತ್ತವನ್ನು ಈ ಮಾಸಾಂತ್ಯಕ್ಕೆ ರೈತ ಸಮುದಾಯದ ಖಾತೆಗಳಿಗೆ ನೂತನ ತಂತ್ರಾಂಶದ ಮೂಲಕ ವರ್ಗಾವಣೆ ಮಾಡಲಾಗುವುದು ಎಂದರು.

## ಜಂಟಿ ಸಮೀಕ್ಷೆಗಳಿಗೂ ಸಹಕಾರಿ

ಇದೇ ಸಂದರ್ಭದಲ್ಲಿ ಮಾತನಾಡಿದ ಕೃಷಿ ಸಚಿವ ಕೃಷ್ಣ ಬೈರೇಗೌಡ ಅವರು ನೂತನ ತಂತ್ರಾಂಶಗಳಿಂದ ಇನ್ನು ಮುಂದೆ ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೆ ನಿಗದಿತ ಸಮಯದಲ್ಲಿ ಪರಿಹಾರ-ನೆರವು ದೊರೆಯಲಿದೆ. ಆಧುನಿಕ ತಂತ್ರಾಂಶಗಳು ಮುಂಬರುವ ದಿನಗಳಲ್ಲಿ ಜಂಟಿ ಸಮೀಕ್ಷೆಗಳಿಗೂ ಸಹಕಾರಿಯಾಗಲಿದೆ ಎಂದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹೆಚ್. ಕೆ. ಪಾಟೀಲ್, ಕೃಷಿ ಸಚಿವ ಕೃಷ್ಣ ಬೈರೇಗೌಡ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ ಸುಭಾಷ್ ಚಂದ್ರ ಕುಂಟಿಯಾ, ಅಪರ ಮುಖ್ಯ ಕಾರ್ಯದರ್ಶಿ, ಅಭಿವೃದ್ಧಿ ಆಯುಕ್ತ ಹಾಗೂ ಕೃಷಿ ಉತ್ಪನ್ನ ಆಯುಕ್ತರೂ ಆದ ಟಿ ಎಂ ವಿಜಯಭಾಸ್ಕರ್,

ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎಲ್ ಕೆ ಅತೀಕ್ ಅವರೂ ಸೇರಿದಂತೆ ಹಲವು ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಹಾಜರಿದ್ದರು.

**ಪರಿಹಾರ ತಂತ್ರಾಂಶದ ವಿಶೇಷತೆ !**

ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ವಿಭಾಗವು ಭೂಮಿ ಉಸ್ತುವಾರಿ ಕೋಶದ ಸಹಯೋಗದೊಂದಿಗೆ ಸಿದ್ದಪಡಿಸಿರುವ ಪರಿಹಾರ ತಂತ್ರಾಂಶವನ್ನು ಯಾವುದೇ ಆರ್ಥಿಕ ಹೊರೆ ಇಲ್ಲದೆ ಅಭಿವೃದ್ಧಿಪಡಿಸಿರುವುದು ಒಂದು ವಿಶೇಷತೆಯಾಗಿದೆ. ಈ ತಂತ್ರಾಂಶದ ಅನುಸಾರ ಆಧಾರ್ ಸಂಖ್ಯೆ ಜೋಡಣೆಯಾದ ಫಲಾನುಭವಿ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಇನ್‌ಪುಟ್ ಸಬ್ಸಿಡಿ ಜಮೆ ಆಗಲಿದೆ. ಆಡಳಿತಾತ್ಮಕ ವಿಳಂಬ, ಮಧ್ಯವರ್ತಿಗಳ ಹಾವಳಿಯೂ ಒಳಗೊಂಡಂತೆ ವಿವಿಧ ಹಂತಗಳಲ್ಲಿ ಫಲಾನುಭವಿಗಳು ಎದುರಿಸುತ್ತಿದ್ದ ಹತ್ತು-ಹಲುವು ಸಮಸ್ಯೆಗಳು ಒಮ್ಮಲೆ ನಿವಾರಣೆಯಾಗಲಿದೆ.

ಈ ತಂತ್ರಾಂಶದಿಂದ ಜಿಲ್ಲಾಡಳಿತಗಳಿಗೂ ಆಡಳಿತಾತ್ಮಕ ಹೊರೆ ಕಡಿಮೆಯಾಗಲಿದೆ. ಬರದಿಂದಾಗುವ ತೀವ್ರತೆ ಹಾಗೂ ಪರಿಣಾಮ ತಗ್ಗಿಸುವಲ್ಲಿ ಕಾರ್ಯ ನಿರ್ವಹಿಸಲು ಅನುವಾಗಲಿದೆ. ರೈತರ ಜಮೀನಿನ ವಿವರ ಭೂಮಿ ತಂತ್ರಾಂಶದ ಮೂಲಕ ದೊರೆಯುವುದರಿಂದಲೂ ಹಾಗೂ ಅರ್ಹ ಫಲಾನುಭವಿಗಳ ಬೆಳೆ ನಾಶದ ವಿಸ್ತೀರ್ಣದ ವಿವರ ಖಚಿತವಾಗಿ ಲಭ್ಯವಾಗುವುದರಿಂದಲೂ ವಿವೇಚನೆಗೆ ಅವಕಾಶವಿರುವುದಿಲ್ಲ. ಪರಿಹಾರ ತಂತ್ರಾಂಶದಲ್ಲಿ ಭೂಮಿಯ ಮಾಲೀಕರು ನಿಧನರಾಗಿ ಖಾತೆ ಬದಲಾವಣೆ ಅಥವಾ ಮ್ಯುಟೇಶನ್ ಆಗದಿದ್ದಲ್ಲಿ ಅಂತಹ ಮಾಲೀಕರ ಕಾನೂನಾತ್ಮಕ ವಾರಸುದಾರರ ವಿವರಗಳನ್ನು ನಮೂದಿಸಿ ಇನ್‌ಪುಟ್ ಸಬ್ಸಿಡಿ ಪಡೆಯಲು ಹಾಗೂ ವಿತರಿಸಲು ಅವಕಾಶವಿದೆ.

ಪರಿಹಾರ ತಂತ್ರಾಂಶದಲ್ಲಿ ಪ್ರತಿ ಹಂತದಲ್ಲೂ ವಿವರಗಳನ್ನು ಪರಿಶೀಲಿಸಲಾಗುವುದು. ತಂತ್ರಾಂಶದಲ್ಲಿ ಅಳವಡಿಸಿರುವ ಆಧಾರ್ ವಿವರವನ್ನು ಭಾರತದ ವಿಶಿಷ್ಠ ಗುರುತು ಪ್ರಾಧಿಕಾರದ (ಯುನೀಕ್ ಐಡೆಂಟಿಫಿಕೇಶನ್ ಅಥಾರಿಟಿ ಆಫ್ ಇಂಡಿಯಾ )ಮೂಲಕ ದೃಢೀಕರಿಸಲಾಗುವುದು. ಅಂತೆಯೇ, ಭಾರತದ ರಾಷ್ಟ್ರೀಯ ನಿಗಮ ( ನ್ಯಾಷನಲ್ ಪೇಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ ) ಮೂಲಕ ಫಲಾನುಭವಿಯ ಬ್ಯಾಂಕ್ ಖಾತೆಯು ಆಧಾರ್ ಸಂಖ್ಯೆಗೆ

ಜೋಡಣೆಯಾಗಿರುವ ಬಗ್ಗೆ ದೃಢೀಕರಿಸಿಕೊಂಡ ನಂತರವೇ ಫಲಾನುಭವಿಗಳಿಗೆ ಇನ್‌ಪುಟ್ ಸಬ್ಸಿಡಿ ವರ್ಗಾವಣೆಯಾಗಲಿದೆ.

ಈ ತಂತ್ರಾಂಶದಲ್ಲಿ ರೈತರ ವಿವರಗಳನ್ನು ಒಂದು ಬಾರಿ ಅಳವಡಿಸಿದ ನಂತರ ಮುಂದೆ ಅದೇ ಫಲಾನುಭವಿಗಳಿಗೆ ಇನ್‌ಪುಟ್ ಸಬ್ಸಿಡಿ ವರ್ಗಾಯಿಸಬೇಕಾದಲ್ಲಿ ಮತ್ತೊಮ್ಮೆ ವಿವರಗಳನ್ನು ಅಳವಡಿಸುವ ಅವಶ್ಯಕತೆ ಇಲ್ಲ. ಇದರಿಂದ ಆಡಳಿತ ಯಂತ್ರಕ್ಕೆ ಸಾರ್ವಜನಿಕ ಸಮಯ ಉಳಿತಾಯವಾಗಲಿದೆ.

******

ಡಿ ಪಿ ಎಂ : ಟಿ ಸಿ ಎಂ ಬಿ